ಶ್ರೀ ಎಸ್. ಆರ್. ಬೊಮ್ಮಾಯಿ.—ಮೂರು ತಿಂಗಳಲ್ಲಿ ಮಂತ್ರಿ ಮಂಡಳದ ನಿರ್ಣಯಕ್ಕೆ ಹೋಗಿದೆ. ಆದಷ್ಟು ಬೇಗ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಒಂದೇ ಸಲ ಎಲ್ಲಾ ಜಿಲ್ಲೆಗಳನ್ನು ಮಾಡಿದ್ದರೂ ತಮಿಳು ನಾಡಿನಲ್ಲಿ ಹೇಗೆ ಹಂತಹಂತವಾಗಿ ಮಾಡಿದ್ದಾರೆ ಆ ರೀತಿಯಲ್ಲಿ ಒಂದೊಂದು ವರ್ಷದಲ್ಲಿ ಒಂದೊಂದು ಜಿಲ್ಲೆಗಳನ್ನು ಮಾಡಿ, ನಾಲ್ಕಾರು ವರ್ಷಗಳಲ್ಲಿ ಈ ಕೆಲಸವನ್ನು ಮಾಡಿ ಮುಗಿಸುತ್ತೇವೆ. ಈ ವಿಚಾರ ಸರಕಾರದ ಪರಿಗಣನೆಯಲ್ಲಿ ಇದೆ.

ಶ್ರೀ ವಿನಯಕುಮಾರ ಸೊರಕೆ —ಅಧ್ಯಕ್ಷರೆ, ವರದಿಯ ಪ್ರಕಾರ ಜಿಲ್ಲಾ ವಿಭಜನೆ ಮಾಡ ತಕ್ಕಂಥಾದ್ದರಲ್ಲಿ ಮಂಗಳೂರು ಮತ್ತು ಉಡುಪಿ ಎಂದು ಎರಡು ಜಿಲ್ಲೆಗಳನ್ನು ಮಾಡುತ್ತಾರೆ ಎಂದು ಹೇಳಿದ್ದಾರೆ. ನಮ್ಮ ಪುತ್ತೂರು ಕೂಡ ಸಬ್‌ಡಿವಿಜನ್ ಮಾಡಬೇಕೆಂದು ಸಾರ್ವಜನಿಕರ ಒಂದು ಬೇಡಿಕೆ ಇತ್ತು. ಮಂಗಳೂರು ಈಗ ಕಾರ್ಪೋರೇಶನ್ ಇದೆ. ಪುತ್ತೂರು, ಬಳ್ತಂಗಡಿ, ಸೂಳ್ಯ, ಇವುಗಳೆಲ್ಲ ಸೇರಿ ಒಂದು ಗ್ರಾಮಾಂತರ ಜಿಲ್ಲೆಯನ್ನು ಮಾಡಿದರು ಒಳ್ಳೆಯದೆಂ. ಪುತ್ತೂರು ವಿಭಾಗವನ್ನು ಸಬ್‌ಡಿವಿಜನ್ ಎಂದಾ ಮಾಡಬೇಕು. ತಮ್ಮ ರಿಪೋರ್ಟ್‌ನಲ್ಲಿ ಕಡಬವನ್ನು ಕೂಡ ತಾಲ್ಲೂಕು ಮಾಡ ಬೇಕೆಂದು ಹೇಳಿದ್ದಾರೆ. ಈ ಹಿಂದೆಯೂ ಕೂಡ ಉಡುಪಿಯನ್ನು ಜಿಲ್ಲೆಯಾಗಿ ಮಾಡುವ ಬಗ್ಗೆ ಮತ್ತು ಪುತ್ತೂರು ಸಬ್‌ಡಿವಿಜನ್ ಆಗಿ ಮಾಡುವ ಬಗ್ಗೆ ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡಿದ್ದೆವು. ಸಾರ್ವಜನಿಕರ ಮನವಿಯೂ ಕೂಡ ಇತ್ತು. ಆದುದರಿಂದ ನಮ್ಮ ವಿನಂತಿಯನ್ನು ಮನ್ನಣೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜಿಲ್ಲೆಗಳ ಪುನರ್ ವಿಂಗಡಣೆ ಆದಾಗ ಸಬ್ ಡಿವಿಜನ್‌ಗಳೂ ಕೂಡ ಬದಲಾವಣೆ ಆಗುತ್ತವೆ, ಆಗ ಇದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪುತ್ತೂರು ಕೂಡ ಸಬ್‌ಡಿವಿಜನ್ ಇದೆ. ಅದಕ್ಕೆ ಜಿಲ್ಲೆ ಎಂದು ಕನ್ವರ್ಟ್ ಮಾಡಿ, ಹಾಗೆಯೇ ಉಡುಪಿಯೂ ಒಂದು ಜಿಲ್ಲೆಯಾಗುತ್ತದೆ. ಮಂಗಳೂರು ಕಾರ್ಪೋರೇಶನ್ ಆಗುತ್ತದೆ. ಅಂದರೆ ಮಂಗಳೂರು, ಉಡುಪಿ, ಜಿಲ್ಲೆಗಳು ಎಂದು ಮಾಡುವ ಬದಲು, ಉಡುಪಿ, ಪುತ್ತೂರು ಗ್ರಾಮಾಂತರ ಜಿಲ್ಲೆ ಎಂದು ಮಾಡಿದರೆ ಒಳ್ಳೆಯದು ಎಂದು ಅಭಿಪ್ರಾಯ ಪಡುತ್ತಾರೆ.

Regarding release of arrears Hostel Grants

1284. SRI M. MALLIKARJUNA KHARGE (Gurumietkal).—Will the Minister for for Social Welfare be pleased to State.—

(a) Whether Government has promised last years to release the arrears of hostel grants of Dr. Ambedkar Degree College and Milind Junior College, Gulbarga.

(b) If so, the action taken by the Government to release the said grants ?

SRI G. BASAVANNAPPA (Minister for Social Welfare).—

(a) Yes.

(b) Arrears of Rs. 49,742 and Rs. 35,350 has been sanctioned on 10-5-1988 to the Principals of Milind Junior College, Gulbarga and Dr. Ambedkar Degree College, Gulbarga respectively.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸುಮಾರು ಎರಡು ವರ್ಷಗಳಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ ತಾವು ಇದೇ ರೀತಿಯಾದ ಉತ್ತರವನ್ನು ಹೇಳುತ್ತಾ ಬಂದಿದ್ದೀರಿ, ಜಿಲ್ಲಾ ಪರಿಷತ್ತಿನವರು ಹೇಳುತ್ತಾರೆ ನಮಗೆ ಇನ್ನೂ ಹಣ ಬಂದಿಲ್ಲ ಬಾಕಿ ಕೊಡತಕ್ಕಂಥಾದ್ದು ಇದೆ ಎಂದು. ನಾನು ಪ್ರಶ್ನೆ ಹಾಕಿದ ಮೇಲೆ ಅಂದರೆ ಎರಡು ದಿವಸದ ಹಿಂದೆ ೧೦-೫-೮೮ರಲ್ಲಿ ಹಣವನ್ನು ಬಿಡುಗಡೆ ಮಾಡಿದ್ದೀರಿ,

ಆದರೆ ಆ ಹಣ ಇನ್ನೂ ಅಲ್ಲಿಗೆ ಮುಟ್ಟಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ಇಲ್ಲಿ ಶಾಸಕನಾಗಿದ್ದೇನೆ. ರೆಪ್ರಸಂಟೇಷನ್ ಅನ್ನು ಬೇರೆಯವರು ನನಗೆ ಕೊಡುತ್ತಾರೆ ನಾನು ಇಲ್ಲಿ ಆ ವಿಚಾರವನ್ನು ಪ್ರಶ್ನೆ ಮಾಡಬಹುದು. ಆದರೆ ಬಡವರು ಯಾರು ಇಲ್ಲಿಯವರೆಗೆ ಬರುವ ಹಾಗೆಯೇ ಇಲ್ಲ. ಜಿಲ್ಲಾಧಿಕಾರಿಗಳು ನನಗೆ ನಾಲ್ಕು ಸಲ ಫೋನ್ ಮಾಡಿ ಹಾಸ್ಟೆಲ್ ನಡೆಸಿ ಎಂದು ಒತ್ತಾಯ ಮಾಡಿದರೆ ನಾನು ನಡೆಸುವುದಕ್ಕಾಗುವುದಿಲ್ಲವೆಂದು ಹೇಳಿದೆ. ಹಾಸ್ಟೆಲ್ ಅರಿಯರ್ಸ್ ಅನ್ನು ತೆಗೆದುಕೊಳ್ಳುವುದಕ್ಕೆ ನಾಲ್ಕು ತಿಂಗಳು ತಿರುಗಬೇಕು ಆ ಎಸ್ಟಾಬ್ಲಿಷ್‌ಮೆಂಟ್‌ನ ಕ್ಲರ್ಕ್ ಅನ್ನು ಹಿಡಿದುಕೊಂಡು ಅವರಿಗೆ ಹಣ ಕೊಟ್ಟು ಮಾಡಿಸಿಕೊಳ್ಳಬೇಕು. ಇಲ್ಲದಿದ್ದರೆ ಆತ ನೂರೆಂಟು ಕ್ವೆರಿ ಹಾಕುತ್ತಾನೆ. ಒಂದು ಡಿಗ್ರಿ ಕಾಲೇಜ್ ಪ್ರಿನ್ಸಿಪಾಲ್ ಯಾವುದೋ ಒಬ್ಬ ಕ್ಲರ್ಕ್ ಹತ್ತಿರ ಹೋಗಿ ನಿಲ್ಲುವುದಕ್ಕಾಗುವುದಿಲ್ಲ. ಈ ಹಣ ಬಿಡುಗಡೆಗಾಗಿ ನಾನು ಎರಡು ಮೂರು ಪತ್ರಗಳನ್ನ ಬರೆದೆ ಆದರೆ ಮೊನ್ನೆ ಹಣವನ್ನು ಬಿಡುಗಡೆ ಮಾಡಿದ್ದಿರಿ ಜಿಲ್ಲೆಗಳಲ್ಲಿರತಕ್ಕಂತಹ ಹಾಸ್ಟೆಲ್‌ಗಳ ಗತಿ ಈ ರೀತಿಯಾದರೆ ಬೇರೆ ಇನ್ನಿತರ ಕಡೆಗಳಲ್ಲಿರುವ ಹಾಸ್ಟೆಲ್‌ಗಳ ಗತಿ ಏನು ಎಂಬುದನ್ನು ವಿಚಾರ ಮಾಡಬೇಕು. ಹೇಗಾದರೂ ಇದನ್ನ ನಡೆಸಬೇಕೆಂದು ಕೆಲವರು ಹಾಸ್ಟೆಲ್‌ಗಳಲ್ಲಿ ಹೆತ್ತು ಹುಡುಗರಿದ್ದರೆ ೨೦ ಎಂದು ಬರೆದು ಐದನ್ನು ಇವರು ತೆಗೆದುಕೊಳ್ಳುತ್ತಾರೆ ಉಳಿದ ಐದನ್ನು ಬೇರೆಯವರು ಹಂಚಿಕೊಳ್ಳುತ್ತಾರೆ, ಇದಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯ ಬೇಕು ಇಲ್ಲದಿದ್ದರೆ ಇದು ಉಳಿಯುವುದಿಲ್ಲ ಬಡ ಮಕ್ಕಳಿಗೆ ಸಿಗತಕ್ಕಂಥ ಸೌಲಭ್ಯ ತಪ್ಪಿ ಹೋಗುತ್ತದೆ. ಯಾರೂ ಇದರ ಸೌಲಭ್ಯ ಪಡೆಯುತ್ತಿದ್ದಾರೆ ಅವರು ದೂರು ಕೊಡಬೇಕಾಗುತ್ತದೆ. ಇದಕ್ಕೆ ಪರಿಹಾರ ಕಂಡುಹಿಡಿಯಿರಿ. ನಾನು ಪ್ರಶ್ನೆ ಹಾಕಿದಾಗ ಹಣ ಬಿಡುಗಡೆ ಮಾಡುವ ಪ್ರಯತ್ನ ಮಾಡಬೇಡಿ. ಯಾವಯಾವ ಜಿಲ್ಲೆಯ ಹಾಸ್ಟೆಲ್‌ಗಳಿಗೆ ಎಷ್ಟು ಅರಿಯರ್ಸ್ ಕೊಡಬೇಕಾಗಿದೆ ಅದು ಏಕೆ ಬಾಕಿ ಇದೆ ಎಂದು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಆ ಇನ್ಸ್‌ಟಿಟ್ಯೂಷನ್‌ಗಳಿಗೆ ಕೆಟ್ಟ ಹೆಸರು ಬರುತ್ತದೆ

ಶ್ರೀ ಜಿ. ಬಸವಣ್ಣಪ್ಪ.—ತಮ್ಮ ಕಳಕಳಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಪ್ರಶ್ನೆ ಗುಲ್ಬರ್ಗ ಜಿಲ್ಲೆಯಲ್ಲಿ ಬಹಳ ಗಂಭೀರವಾಗಿದೆ. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗೆ ನಿರ್ದೇಶನವನ್ನು ಕೊಟ್ಟರೂ ಅಲ್ಲಿ ಹಣವಿದ್ದರೂ he has deliberated delayed it ತಡವಾಗಿದೆ ಇದರ ಬಗ್ಗೆ ಎನ್‌ಕ್ವೈರಿ ಮಾಡಿ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ತಿಳಿಸಿದ್ದೇನೆ. ೧೦-೫-೧೯೮೫ರಲ್ಲಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಪರಿಷತ್ತಿನಲ್ಲಿ ಹಣದ ಕೊರತೆಯಿಲ್ಲ. Amount will be kept at the disposal of Principal, Millnd Junior College,

ಶ್ರೀ ಎ. ವಂಟ್ಲೆಕಾರ್ಜುನ ಖರ್ಗೆ.—ತಮಗೆ ಹೊತ್ತಿದ್ದ ಹಾಗೆ ಈ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪ್ರಿ ಮೆಟ್ರಿಕ್ ಇರಲಿ ಅಥವಾ ಪೋಸ್ಟ್ ಮೆಟ್ರಿಕ್ ಇರಲಿ ಅವರಿಗೆ ಕೊಡತಕ್ಕಂತಹ ಸ್ಕಾಲರ್ ಷಿಪ್ ಹಣ ಏನು ಇದೆ ಅದು ಬಹಳ ಕಡಿಮೆ ಇದೆ. ಈಗ ಪ್ರೈಸಸ್ ಎಲ್ಲಾ ಜಾಸ್ತಿಯಾಗಿದೆ. ಸರಕಾರೀ ನೌಕರರ ಸಂಬಳ ಲೆಜಿಸ್ಲೇಟರ್ಸ್‌ರವರ ಸಂಬಳ ಹೆಚ್ಚಾಗಿದೆ ಆದರೆ ವಿದ್ಯಾರ್ಥಿಗಳ ಮಟ್ಟ ಮಾತ್ರ ಅಲ್ಲಿಯೇ ಇದೆ. ಈಗ ಕನ್ಸೂಮರ್ ಇಂಡೆಕ್ಸ್ ಪ್ರಕಾರ ಏನು ಪ್ರೈಸಸ್ ಇದೆ ಅದರ ಪ್ರಕಾರ ಇವರಿಗೂ ಕೂಡ ಹೆಚ್ಚು ಮಾಡಬೇಕು. ಕಾಲೇಜ್ ವಿದ್ಯಾರ್ಥಿಗಳಿಗೆ ೩೦೦ ರೂಪಾಯಿ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ೧೫೦ ರೂಪಾಯಿಯಂತೆ ಏಕೆ ಕನ್‌ಸಿಡರ್ ಮಾಡಬಾರದು. ಬೇರೆಯದಕ್ಕೆ ಸ್ವಲ್ಪ ಕಡಿಮೆ ಮಾಡಿ ಅದಕ್ಕೆ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ವಿದ್ಯಾರ್ಥಿಗಳಿಗೆ ಒಳ್ಳೆಯ ಊಟ ಉಪಚಾರ ಸಿಗುವಂತಹ ಪ್ರಯತ್ನ ಮಾಡಬೇಕು.

ಇಲ್ಲಿ ಏಕೆ ಮ್ಯಾಕ್ಸಿಮಂ ಶೋಷಣೆ ಮಾಡುತ್ತಾರೆಂದರೆ ಹಣ ಸಿಕ್ಕುವುದು ಕೇವಲ ೭೫ ರೂಪಾಯಿಗಳು ಮಾತ್ರ. ಅಷ್ಟು ಹಣಕ್ಕೆ ಯಾವದೋ ಒಂದು ಊಟ ಹಾಕಿ ಉಳಿತು ಅನ್ನಿಸೋಣ ಎಂದು ಕೊಳ್ಳುವುದರಿಂದ ಹಾಗೆಲ್ಲಾ ಆಗುತ್ತದೆ. ಆದ್ದರಿಂದ ದಯವಿಟ್ಟು ಅದನ್ನು ಎನ್‌ಹ್ಯಾನ್ಸ್ ಏಕೆ ಮಾಡಬಾರದು ?

ಶ್ರೀ ಜಿ. ಬಸವಣ್ಣಪ್ಪ.—ಪ್ರೀ ಮೆಟ್ರಿಕ್ ವಿದ್ಯಾರ್ಥಿಗಳಿಗೆ ೧೦೦ ಇದ್ದುದನ್ನು ೧೫೦ ರೂಪಾಯಿಗಳಿಗೆ ಮಾಡಲು ಮತ್ತು ಕಾಲೇಜ್ ೧೫೦ ಇದ್ದಾದು ೨೫೦ ರೂಪಾಯಿಗಳಿಗೆ ಏರಿಸಲು ನಾನು ಕ್ರಮ ತೆಗೆದುಕೊಂಡಿದ್ದೇವೆ. ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.--ಇದು ಈ ವರ್ಷದಿಂದಲೇ ಜಾರಿಗೆ ಬರುತ್ತದೆಯೇ? ಏಕೆಂದರೆ ಕಾಮತ್ ಹೋಟೆಲ್‌ಲ್ಲಿ ಒಂದು ಕಾಫಿಗೆ ಎರಡು ರೂಪಾಯಿ ತೆಗೆದುಕೊಳ್ಳುತ್ತಾರೆ, ಆದರೆ ನೀವು ಊಟ ಕ್ಕೆಂದು ಕೊಡುತ್ತಿರುವುದು ೩ ರೂಪಾಯಿ ಇದರಿಂದ ಹುಡುಗರಿಗೆ ಊಟ ಹಾಕಲು ಹೇಗೆ ಸಾಧ್ಯ ?

SRI G. BASAVANNAPPA.—As a Social Welfare Minister I am at it and I will see that it is implemented.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಕೊಡುವ ಅನುದಾನವನ್ನು ಸಕಾಲದಲ್ಲಿ ಮುಂಗಡ ವಾಗಿ ಕೊಡುವಂತೆ ಕಾಣುತ್ತಿಲ್ಲ. ನಮ್ಮ ಕಡೆಯ ಒಂದು ಹಾಸ್ಟೆಲ್ಲಿ ವಿದ್ಯಾರ್ಥಿಗಳು ಎರಡು ತಿಂಗಳು ಬರೀ ರಾಗಿ ಮುದ್ದೆ ತಿಂದುಕೊಂಡಿದ್ದರು, ಊಟ ಇರಲಿಲ್ಲ, ಇದರ ಬಗ್ಗೆ ಮುಂತ್ರಿಗಳಿಗೂ ಬರೆದರು, ಜಿಲ್ಲಾಪರಿಷತ್ತಿನಲ್ಲೂ ರಿಸಲ್ಯೂಷನ್ ಆಯಿತು. ಇನ್ನು ಮುಂದೆ ದಯವಿಟ್ಟು ಮುಂಗಡವಾಗಿಯೇ ಹಣವನ್ನು ರಿಲೀಸ್ ಮಾಡಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಎಲ್ಲಾ ಸರ್ಕಾರಿ ವಿದ್ಯಾರ್ಥಿನಿಲಯಗಳಿಗೂ ಸಕಾಲದಲ್ಲೀಯೇ ಹಣ ರಿಲೀಸ್ ಮಾಡಿದ್ದೇವೆ. ಕಂಪ್ಲೇಂಟ್ ಇರುವ ಖಾಸಗೀ ನಿಲಯಗಳ ಬಗ್ಗೆ ಕೆಲವು ಸಲ ತಡವಾಗಿರ ಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ನಿಮ್ಮ ಪತ್ರವನ್ನೇ ಲೆಕ್ಕಕ್ಕೆ ತೆಗೆದುಕೊಳ್ಳದಿರುವಂಥ ವರ್ತನೆಯನ್ನು ಅಧಿಕಾರಿಗಳು ತೋರುತ್ತಿದ್ದಾರೆ. ಅಂಥವರ ಮೇಲೆ ಏನು ಆಕ್ಷನ್ ತೆಗೆದು ಕೊಳ್ಳುತ್ತೀರಿ. ಮತ್ತು ಅದನ್ನು ಈ ಸದನಕ್ಕೆ ತಿಳಿಸುತ್ತೀರಾ ?

SRI G. BASAVANNEPPA.—I have already ordered for the enquiry in that connection.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎನ್‌ಕ್ವೈರಿಗೆ ಎಷ್ಟು ದಿವಸ ಬೇಕು ? ನಿಮ್ಮ ಪತ್ರದ ಮೇಲೆ ಆಕ್ಷನ್ ತೆಗೆದುಕೊಳ್ಳಲು ಎರಡು ವರ್ಷ ತೆಗೆದುಕೊಳ್ಳಬೇಕಾದರೆ ಬೇರೆಯವರಗತಿ ಏನು ? ನೀವು ಆಕ್ಷನ್ ತೆಗೆದುಕೊಂಡರೆ ನಮಗ್ಯಾಕಪ್ಪ ತಡ ಮಾಡೋದು, ಕೋಳೇರು ಜೋರಾಗಿದ್ದಾರೆ ಎಂದು ಬೇರೆಯವರು ಹುಷಾರಾಗುತ್ತಾರೆ ಅದೂ ಅಲ್ಲದೆ ನೀವು ಮಾಡಬೇಕೆಂದಿರುವುದನ್ನು ಬೇಗನೆ ಮಾಡಿ. ಏಕೆಂದರೆ ಯಾವಾಗ ನಿಮ್ಮ ಪೋರ್ಟ್‌ಫೋಲಿಯೋ ಏನಾಗಂತ್ತದೆಯೋ ಗೊತ್ತಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ನಾನು ವರದಿ ಪಡೆಯಬೇಕಾಗಿದೆ. ಅದು ಬಂದ ನಂತರ ಅವರಿಗೆ ತಿಳಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೂಕ ಮತ್ತು ಅಳತೆ ಇಲಾಖೆಯವರು ದಾಖಲು ಮಾಡಿರುವ ಮೊಕದ್ದಮೆಗಳು

೧೩೧೬. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) —ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ೧೯೮೫-೮೬, ೮೬-೮೭ನೇ ಡಿಸೆಂಬರ್ ಆಖೈರುವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೂಕ ಮತ್ತು ಅಳತೆ ಇಲಾಖೆಯವರು ತನಿಖೆ ನಡೆಸಿ ದಾಖಲು ಮಾಡಿರುವ ಮೊಕದ್ದಮೆಗಳೆಷ್ಟು ?

ಆ) ಹಾಗಿದ್ದಲ್ಲಿ ಈ ಮೊಕದ್ದಮೆಗಳಲ್ಲಿ ವಸೂಲಾದ ದಂಡದ ಮೊತ್ತವೆಷ್ಟು ಹಾಗೂ ಬಾಕಿ ಇರುವ ಮೊತ್ತವೆಷ್ಟು ? (ವರ್ಷವಾರು ವಿವರ ನೀಡುವುದು)